SI.A.No.78/2021

AW-1,

ದಿನಾಂಕಃ 26-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಅರ್ಜಿದಾರರ ಪರವಾಗಿಃ ಶ್ರೀ.LMP ವಕೀಲರಿಂದ

ಈ ಪ್ರಕರಣದಲ್ಲಿ ವಿಚಾರಣಾಧಿಕಾರಿಯಾಗಿ ನಾನು ಆಂತರಿಕ ವಿಚಾರಣೆಯನ್ನು ನಡೆಸಿದ್ದೇನೆ ಆದರೆ ದಾಖಲಾತಿಗಳನ್ನು ನೋಡಿ ಸಾಕ್ಷಿ ಹೇಳಬೇಕಾಗುತ್ತದೆ. ವಿಚಾರಣಾಧಿಕಾರಿಯಾಗಿ ನಾನು ಕ್ವಾಸಿ ಜುಡಿಷಿಯಲ್ ಅಥಾರಿಟಿ ಆಗಿರುತ್ತೇನೆ ಎಂದರೆ ನಿಜ. ವಿಚಾರಣೆ ಮಾಡುವ ಸಮಯದಲ್ಲಿ ತಾರತಮ್ಯ ಮಾಡುವುದು, ಏಕಪಕ್ಷೀಯವಾಗಿರುವುದು ಇತ್ಯಾದಿ ಮಾಡಬಾರದು ಎಂಬ ಅರಿವು ನನಗಿದೆ. ನನ್ನನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ ಎಂಬ ಬಗ್ಗೆ ನಾನು ಎದುರುದಾರರಿಗೆ ಯಾವುದೇ ರೀತಿಯಲ್ಲಿ ಸಂಪರ್ಕ ಮಾಡಿರುವುದಿಲ್ಲ. ಆದರೆ ಮ್ಯಾನೇಜಮೆಂಟರವರು ಮಾಡಿರುತ್ತಾರೆ. ಎದುರುದಾರರು ವಿಳಾಸ ಕೊಡಿ ಮತ್ತು ನಂಬರ್ ಕೊಡಿ ಎಂದು ಕೇಳಿದಾಗ ಅರ್ಜಿದಾರ ಫ್ಯಾಕ್ಟರಿಯೇ ನನ್ನ ವಿಳಾಸ ಎಂದು ನಾನು ಹೇಳಿದ್ದೇನೆ. ನಾನು ದಿನಾಲೂ ಫ್ಯಾಕ್ಟರಿ ಕಡೆಗೆ ಹೋಗುತ್ತಿರಲಿಲ್ಲ ನನಗೆ ಪತ್ರಗಳು ಬಂದರೆ ಕಳುಹಿಸಿಕೊಡುತ್ತಿದ್ದರು ಅಥವಾ ಫೋನ್ ಮಾಡಿ ಹೇಳುತ್ತಿದ್ದರು. ಈ ವಿಚಾರಣೆ ನಡೆಸುವ ಸಮಯದಲ್ಲಿ ನಾನು ಬೇರೆ ಕಡೆ ಕೆಲಸ ಮಾಡುತ್ತಿರಲಿಲ್ಲ, ನಿವೃತ್ತನಾಗಿದ್ದೆ. ನಾನು ಈ ಹಿಂದೆ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ದಾಂಡೇಲಿಯಲ್ಲಿ ಕೆಲಸ ಮಾಡುತ್ತಿದ್ದೆ. ಅದಕ್ಕಿಂತ ಪೂರ್ವದಲ್ಲಿ ಜೆ ಕೆ ಟೈರ್ಸನಲ್ಲಿ ನಾನು ಕೆಲಸ ಮಾಡುತ್ತಿದ್ದೆ. ಈ ಎರಡೂ ಕಂಪನಿಗಳಲ್ಲಿ ಕೆಲಸ ಮಾಡುವಾಗ ನಾನು ಮ್ಯಾನೇಜಮೆಂಟಿನಲ್ಲಿದ್ದುಕೊಂಡು ಕೆಲಸ ಮಾಡುತ್ತಿದ್ದೆ ಎಂದರೆ ನಿಜ. ಆಂತರಿಕ ವಿಚಾರಣೆಯನ್ನು ಅರ್ಜಿದಾರ ಫ್ಯಾಕ್ಟರಿಯಲ್ಲೇ ಮಾಡಿದ್ದೇನೆ. ವಿಚಾರಣೆ ಆರಂಬಿ,ಸುವ ಮುನ್ನ ವಿಚಾರಣೆ ಯಾವರೀತಿಯಲ್ಲಿ ನಡೆಯುತ್ತದೆ ಎಂಬ ಬಗ್ಗೆ ನಾನು ಮೊದಲನೇ ವಿಚಾರಣೆಯಲ್ಲಿ ಎದುರುದಾರರಿಗೆ ಮಾಹಿತಿ ನೀಡಿದ್ದೆ. ನಾನು ಫ್ಯಾಕ್ಟರಿಯಲ್ಲಿ ಆಂತರಿಕ ವಿಚಾರಣೆ ನಡೆಸುವಾಗ ನಡವಳಿಕೆಗಳನ್ನು ಬೆರಳಚ್ಚು ಮಾಡಲು ಸೌಲಭ್ಯಗಳನ್ನು ಒದಗಿಸಿರಲಿಲ್ಲ ಆದ್ದರಿಂದ ಕೈಬರವಣಿಗೆಯಲ್ಲೇ ಬರೆದೆ. ಈ ಬಗ್ಗೆ ಮೊದಲೇ ಬೆರಳಚ್ಚುಗಾರರನ್ನು ಕೊಡುವುದಿಲ್ಲ ಎಂದು ಮ್ಯಾನೇಜಮೆಂಟಿನವರು ಹೇಳಿದ್ದರು ಅದಕ್ಕೆ ನಾನು ಒಪ್ಪಿದ್ದೆ ಈ ಪದ್ಧತಿ ಚಾಲ್ತಿಯಲ್ಲಿ ಇರುತ್ತದೆ.

ನಾನು ಎದುರುದಾರರಿಗೆ ಕೊಟ್ಟ ದೋಷಾರೋಪಣಾ ಪಟ್ಟಿಯನ್ನು ನೋಡಿದ್ದೇನೆ. ದೋಷಾರೋಪಣೆ ಮಾಡಿದವರು ಎದುರುದಾರರಿಗೆ ಸಾಕ್ಷ್ಯ ಪಟ್ಟಿ, ದಾಖಲೆಗಳ ಪಟ್ಟಿ ಮತ್ತು ದಾಖಲೆಗಳ ಪ್ರತಿಗಳನ್ನು ಕೊಡಬೇಕು ಎಂಬ ನಿಯಮದ ಅರಿವು ನನಗಿದೆ. ಸಾಕ್ಷಿಯು ಅದನ್ನು ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಯಾವ ಯಾವ ದಾಖಲೆಗಳನ್ನು ದೋಷಾರೋಪಣೆ ಮಾಡಿದವರು ಹಾಜರುಪಡಿಸುತ್ತಾರೋ ಅದರ ಪ್ರತಿಯನ್ನು ಎದುರುದಾರರಿಗೆ ಕೊಡಬೇಕು ಎಂದರೆ ಸಾಕ್ಷಿಯು

ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಆಂತರಿಕ ವಿಚಾರಣೆಯ ಸಮಯದಲ್ಲಿ ಕಾರ್ಮಿಕರಿಗೆ ತನ್ನನ್ನು ಸಂರಕ್ಷಿಸಿಕೊಳ್ಳಲು ವಕೀಲರವರನ್ನು ನೇಮಿಸಿಕೊಳ್ಳಲು ಅವಕಾಶ ಇರುವುದಿಲ್ಲ. ಕೇವಲ ಸಹ ಕಾರ್ಮಿಕನನ್ನು ಅಥವಾ ಕಾರ್ಮಿಕ ಸಂಘದ ಪದಾಧಿಕಾರಿಯನ್ನು ಸಹೋದ್ಯೋಗಿ ಆಗಿದ್ದಲ್ಲಿ ನೇಮಿಸಿಕೊಳ್ಳಲು ಅವಕಾಶ ಇರುತ್ತದೆ. ಎದುರುದಾರನೊಬ್ಬ ಸಾಮಾನ್ಯ ವ್ಯಕ್ತಿಯಾಗಿರುವುದರಿಂದ ಆಂತರಿಕ ವಿಚಾರಣೆಯಲ್ಲಿ ಪಾಟೀ ಸವಾಲು ಮಾಡಬೇಕಾದ ಸಮಯದಲ್ಲಿ ಈ ವಿಚಾರದಲ್ಲಿ ಅರಿವು ಇರುವ ಇನ್ನೊಬ್ಬ ವ್ಯಕ್ತಿಯ ಅಭಿಪ್ರಾಯ ಪಡೆಯಲು ಅವಶ್ಯಕವಾಗಿದೆ ಎಂದರೆ ಸಾಕ್ಷಿಯು ಸಹ ಕಾರ್ಮಿಕನನ್ನು ನೇಮಿಸಲು ಅವಕಾಶ ಇದೆ ಎಂದು ನುಡಿಯುತ್ತಾರೆ. ಸಹ ಕಾರ್ಮಿಕನು ಒಬ್ಬ ಸಾಮಾನ್ಯ ವ್ಯಕ್ತಿಯಾಗಿರುತ್ತಾನೆ ಮತ್ತು ಆತನಿಗೆ ಕಾನೂನಿನ ಅರಿವು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಹ ಕಾರ್ಮಿಕನನ್ನು ನೇಮಿಸಿಕೊಂಡರೆ ಆತನನ್ನು ಹಾಜರುಪಡಿಸಲು ನಾನು ಆದೇಶ ಮಾಡಬೇಕಾಗುತ್ತದೆ ಮತ್ತು ಮ್ಯಾನೇಜಮೆಂಟಿನವರು ಅನುಮತಿ ಕೊಡಬೇಕಾಗುತ್ತದೆ ಎಂದರೆ ಸಾಕ್ಷಿಯು ನಾನು ಸಹ ಕಾರ್ಮಿಕನನ್ನು ನೇಮಿಸಲು ಆದೇಶವನ್ನು ಮಾಡಿರುತ್ತೇನೆ. ಆದರೆ ಸಹ ಕಾರ್ಮಿಕನನ್ನು ಕರೆದುಕೊಂಡು ಬರುವ ವಿಚಾರ ಕಾರ್ಮಿಕನಿಗೆ ಬಿಟ್ಟ ವಿಚಾರ ಎಂದು ನುಡಿಯುತ್ತಾರೆ. ಸಹ ಕಾರ್ಮಿಕನಿಗೆ ಆಂತರಿಕ ವಿಚಾರಣೆಗೆ ಹಾಜರಾಗಲು ಮ್ಯಾನೇಜಮೆಂಟ್ ನವರು ಒಪ್ಪದಿದ್ದಲ್ಲಿ ನಾನು ಆದೇಶ ಮಾಡಿ ಸಹ ಕಾರ್ಮಿಕನನ್ನು ಕರೆಸಿಕೊಳ್ಳಲು ಆಗುವುದಿಲ್ಲ. ಈ ಪ್ರಕರಣದಲ್ಲಿ ಎದುರುದಾರರ ಸಹ ಕಾರ್ಮಿಕನಾಗಿ ಸೆಂದಿಲ್ ಎನ್ನುವರನ್ನು ನೇಮಕ ಮಾಡಿದ್ದರೂ, ಮ್ಯಾನೇಜ್ಮೆಂಟಿನವರು ಅವಕಾಶ ನೀಡದೇ ಇದ್ದುದರಿಂದ ಆತನಿಗೆ ಆಂತರಿಕ ತನಿಖೆಯಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ ಮತ್ತು ಈ ಬಗ್ಗೆ ನಾನು ಯಾವುದೇ ಆದೇಶವನ್ನು ಮಾಡದೇ ಸುಮ್ಮನಿದ್ದೆ ಎಂದರೆ ಸಾಕ್ಷಿಯು ನಾನು ಆದೇಶ ಮಾಡಿದ್ದರೂ ಕೂಡ ಮ್ಯಾನೇಜ್ಮೆಂಟಿನವರು ಅದನ್ನು ತಿರಸ್ಕರಿಸಿದರು ಮತ್ತು ನಾನು ಮ್ಯಾನೇಜ್ಮೆಂಟಿನವರಿಗೆ ಆದೇಶ ಮಾಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಎದುರುದಾರರು ಮ್ಯಾನೇಜ್ಮೆಂಟ್ ಪರ ಸಾಕ್ಷಿ ಎಂಡಬ್ಲ್ಯೂ-1 ರವರನ್ನು ಹೆಚ್ಚಿನ ಪಾಟೀ ಸವಾಲು ಮಾಡಬೇಕಾಗಿದೆ ಎಂದು ಕೇಳಿಕೊಂಡಾಗ ನಾನು ಅದಕ್ಕೆ ಅವಕಾಶವನ್ನು ಕೊಡಲಿಲ್ಲ ಎಂದರೆ ಸರಿಯಲ್ಲ. ಆನಂತರ ದಿಃ20-7-2020 ರಂದು ಎದುರುದಾರರು ಒಂದು ಅರ್ಜಿಯನ್ನು ಕೊಟ್ಟು ಎಂಡಬ್ಲ್ಯೂ-1 ರವನ್ನು ಮರು ಪಾಟೀ ಸವಾಲಿಗೆ ಕರೆಸಿಕೊಳ್ಳಿ ಎಂದು ಕೇಳಿದರೂ ನಾನು ತಿರಸ್ಕರಿಸಿದೆ ಎಂದರೆ ಸಾಕ್ಷಿ ಆ ಸಮಯದಲ್ಲಿ ಎಂಡಬ್ಲ್ಯೂ-1 ರವರು ಕೆಲಸ ಬಿಟ್ಟು ಹೋಗಿದ್ದರು ಆದ್ದರಿಂದ ತಿರಸ್ಕರಿಸಿದೆ ಎಂದು ನುಡಿಯುತ್ತಾರೆ. ಎಂಡಬ್ಲ್ಯೂ-1 ರವರನ್ನು ಪುನಃ ಕರೆಸಿಕೊಳ್ಳಲು ಆಗುವುದಿಲ್ಲ ಎಂದು ಆಡಳಿತ ವರ್ಗದವರು ಮೌಖಿಕವಾಗಿ ತಿಳಿಸಿದ್ದರು. ಅದನ್ನು ನನ್ನ ನಡವಳಿಕೆಗಳಲ್ಲಿ ನಾನು ಉಲ್ಲೇಖ ಮಾಡಿದ್ದೇನಾ ಎಂದು ನನಗೆ ನೆನಪಿಲ್ಲ. ಆಡಳಿತ ವರ್ಗದವರು ಈ ರೀತಿಯ ಯಾವುದೇ ಮಾಹಿತಿಯನ್ನು ನನಗೆ ಕೊಟ್ಟಿರಲಿಲ್ಲ ಆದರೆ ಏಕಪಕ್ಷೀಯವಾಗಿ ನಾನು

SI.A.No.78/2021
AW-1,

ಎದುರುದಾರರ ಕೋರಿಕೆಯನ್ನು ತಿರಸ್ಕರಿಸಿದೆ ಎಂದರೆ ಸರಿಯಲ್ಲ. ನಾನು ಆಡಳಿತ ವರ್ಗದವರನ್ನು ಎಂಡಬ್ಲ್ಯೂ-1 ರವರನ್ನು ಕರೆಸಿಕೊಳ್ಳುವ ವಿಚಾರದಲ್ಲಿ ಕೇಳಿದೆ ಆದರೆ ಅವರು ಆಗುವುದಿಲ್ಲ ಎಂದು ಹೇಳಿದರು. ಎಂಡಬ್ಲ್ಯೂ-1 ರವರನ್ನು ಕರೆಸಿಕೊಳ್ಳಲು ಆಗದಿದ್ದಲ್ಲಿ ಅವರ ಸಾಕ್ಷ್ಯವನ್ನು ಡಿಸ್ಚಾರ್ಜ ಮಾಡುತ್ತೇನೆ ಎಂದು ನಾನು ಹೇಳಿರಲಿಲ್ಲ. ಅವರು ಆಗಲೇ ಡಿಸ್ಚಾರ್ಜ ಆಗಿದ್ದೆ ಎಂದು ನುಡಿಯುತ್ತಾರೆ. ಆಡಳಿತ ವರ್ಗದವರು ಯಾವುದೇ ಮಾಹಿತಿಯನ್ನು ನೀಡದೇ ಇದ್ದರೂ ಸಹ ನಾನಾಗಿಯೇ ಏಕಪಕ್ಷೀಯವಾಗಿ ಎದುರುದಾರರ ಕೋರಿಕೆಯನ್ನು ತಿರಸ್ಕರಿಸಿದೆ ಎಂದರೆ ಸರಿಯಲ್ಲ. ನಾನು ಆಂತರಿಕ ವಿಚಾರಣಾ ಕಾಲದಲ್ಲಿ ಮುಂದಿನ ವಿಚಾರಣೆ ದಿನಾಂಕ ಮತ್ತು ಸಮಯವನ್ನು ಮುಂಚಿತವಾಗಿ ತಿಳಿಸುತ್ತಿದ್ದೆ. ಆದರೆ ಆ ಸಮಯಕ್ಕೆ ನಾನು ಹೋಗುತ್ತಿರಲಿಲ್ಲ 5-6 ಗಂಟೆ ತಡವಾಗಿ ಹೋಗುತ್ತಿದ್ದೆ ಎಂದರೆ ಸುಳ್ಳು. ಈ ವಿಚಾರದಲ್ಲಿ ಎದುರುದಾರರು ದಿಃ21-9-2020 ರಂದು ನನಗೆ ಪತ್ರ ಒಂದನ್ನು ಬರೆದು 5-6 ಗಂಟೆ ಕಾಯಿಸಿದ ಬಗ್ಗೆ ಹೇಳಿದ್ದರು ಎಂದರೆ ನನಗೆ ನೆನಪಿಲ್ಲ. ಕೆಲವು ಸಂದರ್ಭಗಳಲ್ಲಿ ನಾನು ರಾತ್ರಿ 10-00, 10-30 ಗಂಟೆವರೆಗೂ ವಿಚಾರಣೆ ನಡೆಸಿದ್ದೆ ಎಂದರೆ ನಿಜ. ಸಾಕ್ಷಿಯು ಎದುರುದಾರರು ಅಮಾನತ್ತುಗೊಂಡ ಕಾರ್ಮಿಕನಾಗಿರುವುದರಿಂದ ಅವರಿಗೆ ಕೆಲಸಕ್ಕೆ ತೊಂದರೆ ಆಗುವುದಿಲ್ಲ ಎಂಬ ಕಾರಣದಿಂದ ತಡವಾಗಿ ವಿಚಾರಣೆ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ಎದುರುದಾರರಿಗೆ ಮನೆಯಲ್ಲಿ ತುರ್ತು ಪರಿಸ್ಥಿತಿಗಳು ಇದ್ದರೂ ಕೂಡ ಅದ್ಯಾವುದನ್ನೂ ಗಮನಿಸದೆ ತಡ ರಾತ್ರಿಯವರೆಗೂ ವಿಚಾರಣೆ ಮಾಡಿದ್ದೇನೆ ಎಂದರೆ ಸುಳ್ಳು. ಈ ವಿಚಾರದಲ್ಲಿ ದಿಃ9-11-2021 ರಂದು ಎದುರುದಾರರು ನನಗೆ ಪತ್ರ ಬರೆದಿದ್ದಾರೆ ಎಂದರೆ ಸುಳ್ಳು.

(ಈ ಹಂತದಲ್ಲಿ ಎದುರುದಾರರ ಪರ ವಕೀಲರ ಕೋರಿಕೆ ಮೇರೆಗೆ ಈ ಸಾಕ್ಷಿಯ ಮುಂದಿನ ಪಾಟೀ ಸವಾಲನ್ನು ಮುಂದೂಡಲಾಯಿತು.)

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.